# ಹೊಸ ತಾರೆಗಳ ಉದಯ



ಗೆಲುವಿನ ಸಂಭ್ರಮದಲ್ಲಿ ಮಿಂದ ಹುಬ್ಬಳ್ಳಿ ವಾರಿಯರ್ಸ್‌ನ ಚೇತನ್ ವಿಲಿಯಮ್ಸ್



ಮೈಸೂರು ವಾರಿಯರ್ಸ್‌ನ ರಾಜು ಭಟ್ಕಳ

**ರಾಜ್ಯದ ಯುವ ಕ್ರಿಕೆಟಿಗರ ಚಿಮ್ಮು ಹಲಗೆ ಕೆಪಿಎಲ್. ಐಪಿಎಲ್ ಫ್ರಾಂಚೈಸಿಗಳು ತಾವಾಗಿಯೇ ಬಂದು ತಂಡಕ್ಕೆ ಆಹ್ವಾನ ನೀಡುವಷ್ಟು ಪ್ರಭಾವ ಬೀರಿದೆ. ಹೊಸ ಹೊಸ ಪ್ರತಿಭೆಗಳು ಕ್ರಿಕೆಟ್ ಜಗತ್ತಿನ, ಕ್ರೀಡಾಪ್ರಿಯರ ಗಮನ ಸೆಳೆಯುತ್ತಿದ್ದಾರೆ.**

■ **ವಿಕ್ರಂ ಕಾಂತಿಕೆರೆ**
ಚಿತ್ರಗಳು: ಎಂ.ಆರ್.ಮಂಜುನಾಥ

ಬೆಳಗಾವಿ ಪ್ಯಾಂಥರ್ಸ್ ವಿರುದ್ಧದ ಸೆಮಿಫೈನಲ್ ಪಂದ್ಯದಲ್ಲಿ ಹುಬ್ಬಳ್ಳಿ ಟೈಗರ್ಸ್ ಸೋಲುವುದು ಬಹುತೇಕ ಖಚಿತ ಎನ್ನುವುದು ಪ್ರೇಕ್ಷಕರ ಲೆಕ್ಕಾಚಾರವಾಗಿತ್ತು. ಆದರೆ ನಡೆದದ್ದೇ ಬೇರೆ. ಎಂಟನೇ ಕ್ರಮಾಂಕದ ಬ್ಯಾಟ್ಸ್‌ಮನ್ ಚೇತನ್ ವಿಲಿಯಮ್ಸ್ ಪಂದ್ಯದ ಗತಿ ಬದಲಿಸಿದರು. ಬೆಳಗಾವಿ ಪ್ಯಾಂಥರ್ಸ್ ಸೋತು ಹೊರ ಬಿದ್ದಿತು.

ಹುಬ್ಬಳ್ಳಿಯಲ್ಲಿ ನಡೆದ ಕರ್ನಾಟಕ ಪ್ರೀಮಿಯರ್ ಲೀಗ್ (ಕೆಪಿಎಲ್) ಐದನೇ ಆವೃತ್ತಿಯ ನಿರ್ಣಾಯಕ ಪಂದ್ಯದಲ್ಲಿ ಬೆಳಗಿದ ಚೇತನ್ ವಿಲಿಯಮ್ಸ್ ಕ್ರಿಕೆಟ್ ವಲಯದಲ್ಲಿ 'ಸ್ಟಾರ್' ಪಟ್ಟ ಇರುವ ಆಟಗಾರ ಅಲ್ಲ. ರಾಜ್ಯದ ಪರವಾಗಿ ವಯೋಮಾನದವರ ಕ್ರಿಕೆಟ್ ಆಡಿದವರು. ಆದರೆ ಅವರು ಬೆಳಕಿಗೆ ಬಂದದ್ದು ಕೆಪಿಎಲ್ ಮೂಲಕ. ಟೂರ್ನಿಯಲ್ಲಿ ಒಟ್ಟು 120 ರನ್ ಗಳಿಸಿದ ಅವರಂತೆಯೇ ಹುಬ್ಬಳ್ಳಿ ಟೈಗರ್ಸ್ ಪರ ಆಡಿದ್ದ ಮಹಮ್ಮದ್ ತಾಹ. ಗರಿಷ್ಠ ರನ್ ಗಳಿಸಿದವರ ಪಟ್ಟಿಯಲ್ಲಿ ಎರಡನೇ ಸ್ಥಾನದಲ್ಲಿರುವ ತಾಹ